ಸೂಚನೆಯನ್ನು ತೆಗೆದುಕೊಳ್ಳುತ್ತಾರೋ ಅಥವಾ ಮೊದಲು ತೆಗೆದುಕೊಳ್ಳುತ್ತಾರೋ ಹೇಳಿ ಸ್ವಾಮಿ. ಈ ಹೌಸ್‌ನ ನಿಯಮದ ಪ್ರಕಾರ ಮೊಡಲು ತೆಗೆದುಕೊಳ್ಳಬೇಕಾ ಅಥವಾ ನಂತರ ತೆಗೆದುಕೊಳ್ಳಬೇಕಾ, ಅದನ್ನು ಹೇಳಿ ಬಿಡಿ.

ಅಧ್ಯಕ್ಷರು: ಶೂನ್ಯವೇಳೆಯ ಬಗ್ಗೆ ಏನು ಕೊಟ್ಟಿದ್ದಾರೆಂದರೆ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮೊದಲು ಶೂನ್ಯವೇಳೆಯನ್ನು ತೆಗೆದುಕೊಳ್ಳಬೇಕು. question hour ಆದಮೇಲೆ ಶೂನ್ಯವೇಳೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆಯಿತು.

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ಕಬ್ಬಿಗೆ ರಾಜ್ಯದಲ್ಲಿ ಏಕರೂಪದ ದರ ಇರದೆ ಸುಮಾರು 500.00 ರೂ.ಗಳ ವ್ಯತ್ಯಾಸವಿದ್ದು ರಾಜ್ಯದ ಬೆಲೆಗಿಂತ ಹೊರ ರಾಜ್ಯಗಳಲ್ಲಿ ಧಾರಣೆ ಜಾಸ್ತಿ ಇರುವುದು ಹಾಗೂ ಈ ಬಗ್ಗೆ ಸುಮಾರು 5–6 ಸಾವಿರ ಜನ ಮುಷ್ಕರ ಮಾಡುತ್ತಿರುವ ಹಾಗೂ ಆ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತಾಳಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ರಾಜ್ಯದಲ್ಲಿ ಕಬ್ಬಿಗೆ ಒಂದೇ ರೂಪದ ಧಾರಣೆ ಇಲ್ಲದೇ ಈ ಭಾಗದಲ್ಲಿ ಏನು ಕಬ್ಬು ಬೆಳೆಯುತ್ತಿದ್ದಾರೆ ಅವರಿಗೆ ಉತ್ತರ ಕರ್ನಾಟಕದ ಭಾಗದ ಕಬ್ಬಿಗಿಂತ ಟನ್‌ಗೆ 400/– ರಿಂದ 500/– ರೂಪಾಯಿಗಳ ಕಡಿಮೆ ಧಾರಣೆ ಕೊಡುತ್ತಿರುವುದು, ಕಬ್ಬು ಅರೆಯಲಿಕ್ಕೆ ಸವಲತ್ತು ಇಲ್ಲದಿದ್ದರೂ ಕೂಡ ನಮ್ಮ ಜನ ಕಬ್ಬನ್ನು ರಾಶಿ ಹಾಕಿಕೊಂಡು ಕುಳಿತು ಮೊನ್ನೆ ನಮ್ಮ ರೈತರೆಲ್ಲಾ ಒಂದು ಸ್ಟ್ರೈಕ್ ಮಾಡಿದಾಗ ಸಂಬಂಧಪಟ್ಟ ಸರ್ಕಾರದವರು ಹೋಗಿ ಅವರನ್ನು ವಿಚಾರಣೆ ಮಾಡಿಸಿ, ಅವರಿಗೇನಾದರೂ ಪರಿಹಾರವನ್ನು ನೀಡುವುದನ್ನು ಬಿಟ್ಟು, ಅವರನ್ನು ಅರೆಸ್ಟ್ ಮಾಡಿಸಿರುವುದು ರಾಜ್ಯ ಸರ್ಕಾರಕ್ಕೆ ಗೌರವ ತರುವಂಥ ವಿಚಾರವೇನಲ್ಲ. ಇದನ್ನು ಸರಿಪಡಿಸಲಿಕ್ಕೆ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬ ಬಗ್ಗೆ ಸನ್ಮಾನ್ಯ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಮಿರಾಜುದ್ದೀನ್ ಪಟೇಲ್: ಅಧ್ಯಕ್ಷರೇ ನಮ್ಮದು ಇದರ ಬಗ್ಗೆ ಒಂದು ಪ್ರಶ್ನೆಯಿದೆ.

ಅಧ್ಯಕ್ಷರು: ಈಗ ಇದೇ ವಿಷಯವಾಗಿ ನಿಮ್ಮದು ಪ್ರಶ್ನೆಯಿದೆ, ಅನೇಕ ಜನರ ಪ್ರಶ್ನೆಯೂ ಇದೆ. ಈಗ ಸರ್ಕಾರದ ಪರವಾಗಿ ಉತ್ತರಿಸಿ.

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು): ಕೇಂದ್ರ ಸರ್ಕಾರ ಕಬ್ಬು (ನಿಯಂತ್ರಣ) ಕಾಯ್ದೆ 1966 ರಡಿಯಲ್ಲಿ ಕಲಂ 3(1) ರ ಪ್ರಕಾರ ಕನಿಷ್ಠ ಕಬ್ಬಿನ ಬೆಲೆಯನ್ನು ನಿಗದಿಪಡಿಸಿರುತ್ತದೆ. 2006–07ನೇ ಸಾಲಿಗೆ ಕೇಂದ್ರ ಸರ್ಕಾರ ದಿನಾಂಕ: 05.08.06 ರ ಅಧಿಸೂಚನೆ ಮೇರೆಗೆ ಪ್ರತಿ ಟನ್ ಕಬ್ಬಿಗೆ ಶೇ. 9 ರಷ್ಟು ಇಳುವರಿಗೆ ರೂ. 802.50 ಪೈಸೆ ಕನಿಷ್ಠ ಬೆಲೆಯನ್ನು ನಿಗದಿಪಡಿಸಿದೆ. ಪ್ರತಿ ಸಕ್ಕರೆ ಕಾರ್ಖಾನೆಗಳಿಗೆ ಇಳುವರಿ ಆಧಾರದ ಮೇಲೆ ಕೇಂದ್ರ ಸರ್ಕಾರ ಬೆಲೆ ನಿಗದಿ ಮಾಡಿರುತ್ತದೆ. ಕೇಂದ್ರದ ಅಧಿಸೂಚನೆ ಸಂಖ್ಯೆ: GSR 766 (ಇ) Ess.com/Sugarcane ದಿನಾಂಕ: 22.12.2006 ರ ಮೇರೆಗೆ ಕರ್ನಾಟಕ ರಾಜ್ಯದ ಕೆಲವು ಸಕ್ಕರೆ ಕಾರ್ಖಾನೆಗಳ ಕಬ್ಬಿನ ಕನಿಷ್ಠ ದರವನ್ನು ಈಗಾಗಲೇ ನಿಗದಿಪಡಿಸಿರುತ್ತದೆ.

1998 ರವರೆಗೆ ರಾಜ್ಯ ಸರ್ಕಾರ ಕಬ್ಬಿನ ಬೆಲೆಯನ್ನು ನಿಗದಿ ಮಾಡುತ್ತಿತ್ತು. ಆದರೆ ಗೌರವ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 22139–22141/97 ರಲ್ಲಿ ದಿನಾಂಕ: 13.10.2000 ರಂದು ನೀಡಿರುವ ತೀರ್ಪಿನಲ್ಲಿ ಕಬ್ಬು (ನಿಯಂತ್ರಣ) ಕಾಯ್ದೆ 1966 ರಡಿಯಲ್ಲಿ ರಾಜ್ಯ ಸರ್ಕಾರ ಕಬ್ಬು ಬೆಲೆಯನ್ನು ನಿಗದಿಪಡಿಸಲು ಅವಕಾಶವಿಲ್ಲವೆಂದು ತಿಳಿಸಿದೆ. ಇದಾದ ನಂತರ ರಾಜ್ಯ ಸರ್ಕಾರ ಕಬ್ಬಿನ ಬೆಲೆ ನಿಗಧಿ ಮಾಡುತ್ತಿಲ್ಲ.

2006–07ನೇ ಸಾಲಿನಲ್ಲಿ ರಾಜ್ಯದಲ್ಲಿನ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ. 1100/– ರಂತೆ (ಎಕ್ಸ್‌ಗೇಟ್) ದರ ನೀಡುತ್ತಿದ್ದು, ಮಧ್ಯ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ನಿಗೆ ರೂ. 1125–1100/– ರವರೆಗೆ, (ಎಕ್ಸ್‌ಗೇಟ್) ದರ ನೀಡುತ್ತಿವೆ. ಹಾಗೂ ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ನಿಗೆ ರೂ.1100/– ರಂತೆ (ಎಕ್ಸ್ ಫೀಲ್ಡ್) ದರ ನೀಡುತ್ತಿವೆ. ಉತ್ತರ ಕರ್ನಾಟಕದಲ್ಲಿ ಸಾಗಾಣಿಕೆ ಮತ್ತು ಕಟಾವಿಗೆ ಸರಾಸರಿ ರೂ.250/– ವೆಚ್ಚ ಬರುತ್ತಿದ್ದು, ಇದನ್ನು ಕಾರ್ಖಾನೆಗಳು ಭರಿಸುತ್ತಿದ್ದು, ಅಂದರೆ ಪ್ರತಿ ಟನ್ನಿಗೆ ರೂ.1350/– ರಂತೆ ದರ ಪಾವತಿಸಿದಂತಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವುದೇ ಸಕ್ಕರೆ ಕಾರ್ಖಾನೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ದರಕ್ಕಿಂತ ಕಡಿಮೆ ದರವನ್ನು ಪಾವತಿಸಿಲ್ಲ.

ದಕ್ಷಿಣ ಭಾರತದ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ರಾಜ್ಯ ಸರ್ಕಾರ ಕಬ್ಬಿಗೆ ದರವನ್ನು ನಿಗದಿಪಡಿಸುತ್ತಿಲ್ಲ. ತಮಿಳುನಾಡಿನಲ್ಲಿ 2005–06ರಲ್ಲಿ, 2006–07 ರಲ್ಲಿ ಮಾತ್ರ ರಾಜ್ಯ ಸಲಹಾ ಮಂಡಳಿಯ ದರವನ್ನು ನಿಗದಿಪಡಿಸಿರುತ್ತದೆ. 2005–06ನೇ ಸಾಲಿಗೆ 1015/– ಹಾಗೂ 2006–07ನೇ ಸಾಲಿಗೆ 1025/– ಬೆಲೆ ನಿಗದಿಯಾಗಿರುತ್ತದೆ. ಭಾರತದ ಕೆಲವು ರಾಜ್ಯಗಳು ಉತ್ತರಪ್ರದೇಶ ಸೇರಿದಂತೆ ಆಯಾಯ ರಾಜ್ಯಗಳ ಕಾಯ್ದೆಯನ್ನು ಹೊಂದಿದ್ದು ಅದರ ಪ್ರಕಾರ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದ ಕಬ್ಬಿನ ದರವನ್ನು ನಿಗದಿ ಮಾಡಿದ್ದು ಅದರಂತೆ ಹಣ ಪಾವತಿಯಾಗಿರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೇ, ಕಬ್ಬಿನ ರೈತರು ಸ್ಟ್ರೈಕ್ ಏತಕ್ಕೆ ಮಾಡಿದ್ದಾರೆ ಎನ್ನುವುದರ ಬಗ್ಗೆ ಅವರನ್ನು ಕೂರಿಸಿಕೊಂಡು, ಅವರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಹೇಗಾದರೂ ಮಾಡಿ ಏಕರೂಪದ ಧಾರಣೆಯನ್ನು ರಿಕವರಿ ಮೇಲೆ, ನಾವು ರಿಕವರಿ ಇಲ್ಲದೇನೆ ಕೊಡಿ ಎಂದು ವಾದ ಮಾಡಲಿಕ್ಕೆ ಇಲ್ಲಿ ನಿಂತಿಲ್ಲ. ಅವರೊಂದಿಗೆ ಚರ್ಚೆ ಮಾಡದೆ ಅವರು ಇಲ್ಲಿ 5 ಕಿ.ಮೀ.ಗಳ ದೂರದಿಂದಲೇ ಅವರನ್ನು ಏಕಾಏಕಿ ಅರೆಸ್ಟ್ ಮಾಡಿಸಿ ಕಳುಹಿಸಿಬಿಟ್ಟರೆ ಹೇಗೆ? ನಮ್ಮ ರಾಜ್ಯದ ರೈತರಿಗೆ ಸರ್ಕಾರವನ್ನು ಏನೂ ಕೇಳುವ ಹಕ್ಕೇ ಇಲ್ಲವೇ ಸ್ವಾಮಿ? ಯಾರು ನಿಮ್ಮ ಸರ್ಕಾರವನ್ನು ಏನೂ ಕೇಳಲಿಕ್ಕೆ ಬೆಂಗಳೂರಿಗೆ ಬರಬಾರದೇ? ಸಾಧ್ಯವೋ, ಅಸಾಧ್ಯವೋ, ಸರ್ಕಾರ ನಡೆಸುವವರು ತಾವು ಅವರನ್ನು ಕರೆದು ಕುಳಿತು ಒಂದು ಚರ್ಚೆ ಮಾಡಿ, ಏನೇನು ಪ್ರಾಬ್ಲಮ್ ಇದೆ. ಬೆಲ್ಲ ಮಾಡಿದರೆ ಇವತ್ತು 1500/– ರೂ.ಗಳು ಸಿಗುತ್ತಿದೆ. ಮಹಾರಾಷ್ಟ್ರ ರೂ. 1400 ಕೊಡುತ್ತಿದೆ. ಬೆಳಗಾಂನ ಪಕ್ಕ 20 ಕಿ.ಮೀ ಆಚೆಗೆ ಹೋದರೆ, ಒಂದು ಟನ್‌ಗೆ ರೂ. 1400–1450 ಬೆಲೆ ಸಿಗುತ್ತಿದೆ. ನಮಗೇನಾಗಿದೆಯೆಂದು ಗೊತ್ತಾಗಬೇಕಲ್ಲ. ರೈತರೇನಾದರೂ ಮಾಡಿಕೊಳ್ಳಲಿ, ನಾವು ಆ ಕಡೆ ತಲೆ ಕೆಡಿಸಿಕೊಳ್ಳುವುದಿಲ್ಲವೆಂಬ ಧೋರಣೆಯನ್ನು ತಾವು ತಳೆದಿದ್ದೀರಿ, ಇದು ಖಂಡಿತವಾಗಿ ಗೌರವ ತರುವಂಥ ಧೋರಣೆಯಲ್ಲ. ತಾವೇನಾದರೂ ಈ ಭಾಗದ ರೈತರನ್ನು ಕರೆಸುತ್ತೀರಾ? ಮಾತನಾಡುತ್ತೀರಾ? ಒಂದು ದಿನಾಂಕವನ್ನು ನಿಗದಿ ಮಾಡುವಿರಾ ಎಂದು ನಾನು ಕೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸರ್ಕಾರವನ್ನು ಕೇಳಲಿಕ್ಕೆ ಬಂದ ರೈತರನ್ನು ಅರೆಸ್ಟ್ ಮಾಡಿಸಿ ಕಳುಹಿಸಿದರೆ ಹೇಗೆ? ರೈತರೇನು ಮಾಡಿದರು? ಏತಕ್ಕೆ ಅವರನ್ನು ಅರೆಸ್ಟ್ ಮಾಡಿದರು? ಅವರೇನು ಗಲಾಟೆ ಮಾಡಿದರೇ? ಕಲ್ಲು

ಹೊಡೆದರೇ? ಯಾರಿಗಾದರೂ ಗಾಯ ಮಾಡಿದರೇ? ಏತಕ್ಕೆ ಆ ರೈತರನ್ನು ಅರೆಸ್ಟ್ ಮಾಡಿದರು ನೀವು? ಬೆಂಗಳೂರಿಗೆ ಬಂದ ತಕ್ಷಣ ಅರೆಸ್ಟ್ ಮಾಡಿದ್ದೀರಲ್ಲಾ, ಏನು ಮಾಡಿದರು ಅವರು?

ಅಧ್ಯಕ್ಷರು: ಈಗ ಮಾನ್ಯ ಮಿರಾಜುದ್ದೀನ್‌ರವರೇ, ನೀವು ಏನಾದರೂ ಕೇಳುವ ಹಾಗಿದ್ದರೆ ಕೇಳಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸರ್, ಅವರು ರೈತರನ್ನು ಏತಕ್ಕೆ ಅರೆಸ್ಟ್ ಮಾಡಿಸಿದರು ಎನ್ನುವ ಬಗ್ಗೆ ಉತ್ತರ ಹೇಳಲಿ.

ಅಧ್ಯಕ್ಷರು: ಈಗ ಕೆಲವರು ನೀಡಿರುವ ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಮಿರಾಜುದ್ದೀನ್ ಪಟೇಲ್ (ಹುಮ್ನಾಬಾದ್): ಬೀದರ್ ಜಿಲ್ಲೆಯಲ್ಲಿ ಮೂರು ಕಾರ್ಖಾನೆಗಳ ಪೈಕಿ ಸೈಕಾರ್ ಕ್ಷೇತ್ರದಲ್ಲಿ ಒಂದು ಕಾರ್ಖಾನೆಯಿದೆ. ಸುಮಾರು ಮೂರು ತಿಂಗಳಿನಿಂದ ರೈತರಿಗೆ ಒಂದು ರೂಪಾಯಿಯನ್ನು ಪೇಮೆಂಟ್ ಮಾಡಲಿಲ್ಲ. ಮೊದಲೇ ರೈತರು ಬಹಳ ಕಷ್ಟದಲ್ಲಿದ್ದಾರೆ, ಕಂಗಾಲಾಗಿದ್ದಾರೆ. ಹಾಗಾಗಿ ಅದಕ್ಕೆ ನಾನು ಇದಕ್ಕೆ ಮುಂಚೆಯೇ ಒಂದು ನೋಟೀಸ್ ಕೊಟ್ಟಿದ್ದೇನೆ, ಆ ರೈತರಿಗೆ ಕಬ್ಬು ತೆಗೆದುಕೊಂಡಿರುವುದಕ್ಕೆ ಪೇಮೆಂಟ್ ಮಾಡಬೇಕು ಎಂದು ಹೇಳಿ. ಈಗ ಮೂರು ತಿಂಗಳಿನದ್ದು, ಸುಮಾರು 7.00 ಲಕ್ಷ ಟನ್ ಕಬ್ಬನ್ನು ಕ್ರಷ್ ಮಾಡಿದ್ದಾರೆ. ಆದರೂ ಒಂದು ಫ್ಯಾಕ್ಟರಿ ಎನ್.ಎಸ್.ಎಸ್.ಗೆ ಮಾತ್ರ ಬರೇ ಮೂರು ದಿವಸದ್ದು ಹಣ ಪಾವತಿಸಿದ್ದಾರೆ. ಅದಕ್ಕೆ 1100 ದರವನ್ನು ಡಿಕ್ಲೇರ್ ಮಾಡಿ ಮೂರು ದಿವಸದ್ದು ಮಾತ್ರ 1100–00 ರೂ.ಗಳನ್ನು ಕೊಟ್ಟಿದ್ದಾರೆ. ಆಮೇಲೆ 15 ದಿವಸಕ್ಕೆ 800 ರೂ.ಗಳಂತೆ ಒಂದು ಟನ್‌ಗೆ ಹಣ ಕೊಡುತ್ತಿದ್ದಾರೆ. ಒಂದು ಎನ್.ಎಸ್.ಎಸ್. ನವರದು ರೂ. 800–00 ಈಗ ಕೊಟ್ಟು ಮೂರು ತಿಂಗಳದ್ದು ಆಮೇಲೆ ಕೊಡುವುದಾಗಿ ಘೋಷಣೆ ಮಾಡಿದ್ದಾರೆ. ಇನ್ನುಳಿದ ಬಿ.ಎಸ್.ಎಸ್.ಗೆ ಮತ್ತು ಮಹಾತ್ಮ ಗಾಂಧಿಯವರದು ಬರೇ 800–00 ರೂ.ಗಳನ್ನು ನಾವು ಕೊಡುತ್ತೇವೆ. ಆಮೇಲೆ Balance Sheet ನೋಡಿ ನಾವು Final ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ರೀತಿ ಇವರು suspense ನಲ್ಲಿ ರೇಟ್ ಇಟ್ಟು ರೈತರಿಗೆ ಮೋಸ ಮಾಡುತ್ತಿದ್ದಾರೆ. ಕಾರ್ಖಾನೆಯವರು ಒಂದು ಸೈಡ್ 1100–00 ರೂ. ಕೊಡುತ್ತಿದ್ದಾರೆ. ಅದರ ಬಗ್ಗೆ ನಾನು ತಮ್ಮ ಮುಖಾಂತರ ಮಾನ್ಯ ಸಕ್ಕರೆ ಸಚಿವರಿಗೆ ಯಾವುದೇ ರೀತಿಯ ಹಣವನ್ನು ಕೊಡಿಸುತ್ತೀರಾ ಎಂಬ ಬಗ್ಗೆ

ಉತ್ತರಕೊಡಿಸಬೇಕು. ಇಲ್ಲವಾದರೆ ನಾನು ದಿನಾಂಕ 12.2.2007 ರಂದು ಡಿ.ಸಿ. ಕಚೇರಿಯ ಎದುರಿಗೆ ಧರಣಿ ಮಾಡಬೇಕೆಂದು ನಿರ್ಧಾರ ಮಾಡಿದ್ದೇನೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿಯೂ ಇದೇ ವಿಷಯವಿದೆ, ತಾವು ಏನಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ ಕೇಳಿ.

5. ಗಮನ ಸೆಳೆಯುವ ಸೂಚನೆ :

ವಿಷಯ: ಶ್ರೀಯುತರುಗಳಾದ ಆರ್. ಧ್ರುವನಾರಾಯಣ್, ಅವರುಗಳು ರೈತರು ಬೆಳೆದ ಕಬ್ಬಿಗೆ ಸೂಕ್ತಬೆಲೆ ನಿಗದಿಪಡಿಸುವ ಕುರಿತು.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮಾರನಹಳ್ಳಿ): ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆ, ಈ ಭಾಗಗಳ ರೈತರ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ತಿಳಿಸಿದಂತೆ ಮೊನ್ನೆ ಸುಮಾರು 10,000 ರೈತರು ಬೆಂಗಳೂರಿಗೆ ಬಂದಿದ್ದರು. ಕಾರಣವೇನೆಂದರೆ ನಮ್ಮ ಭಾಗದ ಕಾರ್ಖಾನೆಯಲ್ಲಿ ಬಣ್ಣಾರಿಯಮ್ಮ ಶುಗರ್ ಕಾರ್ಖಾನೆಯಿರಬಹುದು. ಮಂಡ್ಯದಲ್ಲಿರತಕ್ಕಂಥ ಕಾರ್ಖಾನೆಯಿರಬಹುದು. ಒಂದು ಟನ್‌ಗೆ 825–00 ರೂ.ಗಳನ್ನು ಕೊಡುತ್ತಾರೆ. ಅದರಲ್ಲಿ ಸಾಗಾಣಿಕೆ, ಕೂಲಿಯನ್ನು ಸೇರಿಸಿರುತ್ತಾರೆ. ಉತ್ತರ ಕರ್ನಾಟಕದ ಬೆಳಗಾಂ ಈ ಭಾಗದಲ್ಲಿ 1200–00 ರೂ.ಗಳನ್ನು ಒಂದು ಟನ್‌ಗೆ ಕೊಡುತ್ತಾರೆ. ಬಹಳಷ್ಟು ತಾರತಮ್ಯವಿದೆ. ನಮ್ಮಲ್ಲಿ ಪ್ರೈವೇಟ್ ಕಾರ್ಖಾನೆಗಳ ಮೇಲೆ ನಮ್ಮ ಸಕ್ಕರೆ ಇಲಾಖೆಯವರಿಗೆ ಯಾವುದೇ ನಿಯಂತ್ರಣವಿಲ್ಲ. ಆದ್ದರಿಂದ ಏನೋ ಉತ್ತರ ಕರ್ನಾಟಕದಲ್ಲಿ ಒಂದು ರೀತಿಯ ದರ. ನಮ್ಮಲ್ಲಿ ಒಂದು ರೀತಿಯ ದರ ನಿಗಧಿ ಮಾಡುವುದು ಬಹಳ ಅಸಮಾನತೆಯನ್ನು ತರತಕ್ಕಂಥದ್ದು. ಜೊತೆಗೆ ನಮ್ಮಲ್ಲಿರತಕ್ಕಂಥ ಕಾರ್ಖಾನೆಗಳಲ್ಲಿ ಸಕ್ಕರೆಯನ್ನು ತೆಗೆಯುವುದರ ಜೊತೆಗೆ ಮೊಲಾಸಿಸ್ ತೆಗೆಯುವಂಥಾದ್ದು. ಮತ್ತೆ ಸ್ಪಿರಿಟ್ ಮಾಡುವಂಥಾದ್ದು, ಇವೆಲ್ಲವನ್ನೂ ಕಾರ್ಖಾನೆಯವರು ಇಟ್ಟುಕೊಂಡಿದ್ದಾರೆ. ಹಾಗಾಗಿ ಫ್ಯಾಕ್ಟರಿಯವರಿಗೆ ಅಧಿಕ ಲಾಭ ಬರುತ್ತಿದೆ. ಆ ಭಾಗದಲ್ಲಿ ಬರೇ ಸಕ್ಕರೆ ಮಾತ್ರ ತೆಗೆಯುತ್ತಿದ್ದಾರೆ. ಆದರೂ ಕೂಡ ಒಂದು ಟನ್‌ಗೆ 1200, 1300 ರೂ.ಗಳಿಗೆ ಕೊಡುತ್ತಿದ್ದಾರೆ. ನಮ್ಮಲ್ಲಿ ಇಷ್ಟು ಲಾಭಾಂಶ ಇದ್ದರೂ ಸಹ ಸಕ್ಕರೆ ಜೊತೆ ಮೊಲಾಸಿಸ್‌ನಂಥ ಉಪ ಉತ್ಪಾದನೆಗಳಿಂದ ಅಧಿಕ ಲಾಭ ಪಡೆದರೂ ಕೂಡ ರೈತರಿಗೆ ಸರಿಯಾದ ರೀತಿಯಲ್ಲಿ ದರವನ್ನು ಕೊಡುತ್ತಿಲ್ಲ. ಆದ್ದರಿಂದ ತಕ್ಷಣ ಮಂತ್ರಿಗಳೂ ಆ ಕಾರ್ಖಾನೆಯ ಮಾಲೀಕರನ್ನು ಕರೆಸಿ ಸರಿಯಾದ ರೀತಿಯ ದರವನ್ನು ನಿಗದಿಪಡಿಸಿ ರೈತರಿಗೆ